**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 02-04-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರ ಶ್ರೀ.MJS ವಕೀಲರವರಿಂದಃ-**

ಆರೋಪಿಯನ್ನು ಶಿವಪುರದ ಸರ್ಕಲ್ ಬಳಿ ಬೆಳಗ್ಗೆ 11.00 ಗಂಟೆಯಲ್ಲಿ ನಾನು ಮತ್ತು ನನ್ನ ಅಳಿಯ ಬಂದು ಕೇಳಿರುತ್ತೇವೆ. ದಿನಾಂಕ ನೆನಪಿಲ್ಲ, ಆದರೆ ಭಾನುವಾರ ಆಗಿತ್ತು. ಸದರಿ ದಿನದಂದೇ ಆರೋಪಿಯು ಚೆಕ್ ನೀಡಿರುತ್ತಾರೆ. ಆರೋಪಿಯು ನನ್ನ ಸಂಬಂಧಿಕರು ಅಥವಾ ಸ್ನೇಹಿತರಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರವು ಇಂಗ್ಲಿಷ್ ನಲ್ಲಿ ಬರೆದಿರುವುದರಿಂದ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಅಳಿಯ ಆರೋಪಿಯ ಸ್ನೇಹಿತನಾದ ಸಂತೋಷ್ ರವರಿಂದ ಚೆಕ್ ಪಡೆದು ಆರೋಪಿಗೆ ತೊಂದರೆ ಕೊಡಲು ಪ್ರಸ್ತುತ ಸುಳ್ಳು ಪ್ರಕರಣ ದಾಖಲಿಸಿದ್ದೇವೆಂದರೆ ಸರಿಯಲ್ಲ. ನಿಪಿ-1 ರಲ್ಲಿನ ಒಕ್ಕಣೆಯನ್ನು ಆರೋಪಿಯವರು ಬರೆದಿರುತ್ತಾರೆ. ಸದರಿ ಒಕ್ಕಣೆಯನ್ನು ಆರೋಪಿಯು ಬರೆದಿರದೇ ಸಂತೋಷ್ ರವರಿಂದ ಖಾಲಿ ಚೆಕ್ ಪಡೆದು ಬೇರೆಯವರಿಂದ ಬರೆಸಿ ಹಾಕಿದ್ದೇನೆಂದರೆ ಸರಿಯಲ್ಲ. ಆರೋಪಿಗೆ ಹಣ ನೀಡಿದ 1 ರಿಂದ 3 ತಿಂಗಳ ಅಂತರದಲ್ಲಿ ಹೋಗಿ ಕೇಳಿರುತ್ತೇನೆ. ಬ್ಯಾಂಕ್ ಹಿಂಬರಹ ಏನು ನೀಡಿದ್ದೆ ಮತ್ತು ಪ್ರಕರಣದ ಯಾವುದೇ ತಿಳಿದಿಲ್ಲದಿದ್ದರೂ ಸಂತೋಷ್ ರವರು ಹೇಳಿದಂತೆ ನಾನು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಹಣ ಕೊಟ್ಟಾಗ ನನ್ನ ತಂದೆ ತಾಯಿ ಇದ್ದರು ಎಂದು ಪ್ರಕರಣಕ್ಕಾಗಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯು ನನಗೆ ಪರಿಚಯವಿಲ್ಲ ಮತ್ತು ಸ್ನೇಹಿತನಲ್ಲದ ಕಾರಣ ನಾನು ಅವರಿಗೆ ಸಾಲ ನೀಡುವ ಅಥವಾ ನನ್ನಿಂದ ಅವರು ಸಾಲ ಪಡೆಯುವ ಪ್ರಶ್ನೆಯೇ ಇಲ್ಲ ಎಂದರೆ ಸರಿಯಲ್ಲ. ನನಗೆ 5 ಲಕ್ಷ ಸಾಲ ನೀಡುವ ಸಾಮರ್ಥ್ಯವಿದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ ನ್ನು ಸಂತೋಷ್ ರವರಿಗೆ ನೀಡಿದ್ದು, ನನಗೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ಆರೋಪಿ ಚೆಕ್ ನೀಡಿದಾಗ ನನ್ನ ಅಳಿಯ ಕೂಡ ಇದ್ದರು ಎಂಬ ವಿಚಾರ ಹೇಳಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು